ಶ್ರೀ ಎ. ಲಕ್ಷ್ಮೀಸಾಗರ್,—ಮಾನ್ಯ ಅಧ್ಯಕ್ಷರೇ, ತಪಸಕೂರು ಜಿಲ್ಲೆಯೊಳಗೆ ೧೧ ಮುನಿಸಿಪಾಲಿಟಿಗಳು ಇವೆ. ಈ ಮುನಿಸಿಪಾಲಿಟಿಗಳಲ್ಲಿ ಹಲವಾರು ವರ್ಷಗಳಿಂದ ಅಕೌಂಟ್ಸ್ ಆಡಿಟ್ ಮಾಡಿಲ್ಲ. ಆಡಿಟ್ ಮಾಡತಕ್ಕಂಥ ಕಾರ್ಯಗಳು ಈಗ ಶುರುವಾಗಿವೆ. ೧೯೮೨–೮೩ರಿಂದ ಇಲ್ಲಿಯವರೆಗೆ ಆಡಿಟ್ ರಿಪೋರ್ಟ್‌ಗಳು ಬಂದಿವೆ. ಆ ಆಡಿಟ್ ರಿಪೋರ್ಟ್‌ಗಳ ಪ್ರಕಾರ, ಹಲವಾರು ನ್ಯೂನತೆಗಳು ಇವೆ. ಮಾನ್ಯ ಸದಸ್ಯರು ಹೇಳಿದಂತೆ ಕೆಲವು ದೋಷಗಳು ಕಾಣಿಸಿಕೊಂಡಿವೆ. ಅವುಗಳ ತನಿಖೆ ಮಾಡಿ, ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ, ಜವಾಬ್ದಾರಿಯನ್ನು ನೇರವಾಗಿ ವ್ಯಕ್ತಿ ಅಥವಾ ವ್ಯಕ್ತಿಗಳ ಮೇಲೆ ಹೊರಿಸುವುದಕ್ಕೆ ಹಾಗೂ ಈ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಅಫಿಷಿಯಲ್ ಕಮಿಟಿಯನ್ನು ಮಾಡಿದ್ದೇವೆ. ಇಂತಹ ಕಮಿಟಿಯನ್ನು ತಮಿಳುನಾಡಿನಲ್ಲೂ ಮಾಡಿದ್ದಾರೆ. ಈ ಕಮಿಟಿಯವರು ಪರಿಶೀಲನೆ ಮಾಡಿ, ತಪ್ಪು ಯಾರ ಮೇಲೆ ಇದೆಎನ್ನುವುದನ್ನು ಕಂಡು ಹಿಡಿದು ಕೊಟ್ಟ ನಂತರ, ಕಾನೂನು ಪ್ರಕಾರ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಬಿ. ಕೋಳಿವಾಡ.—ನೀವು ಎನ್‌ಕ್ವೈರಿ ಕಮಿಟಿ ನೇಮಕ ಮಾಡಿದ್ದೀರಿ ನೀವು ಮೊದಲು ತಪ್ಪು ಮಾಡಿದ ಅಧಿಕಾರಿಗಳ ಆಮಾನತ್ತಿನಲ್ಲಿಟ್ಟು ಎನ್‌ಕ್ವೈರಿ ಮಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ನನ್ನ ಉತ್ತರವನ್ನು ಸರಿಯಾಗಿ ಗ್ರಹಿಸಿಲ್ಲ. ಮುನಿಸಿಪಾಲಿಟಿಗಳಲ್ಲಿ ಆಗತಕ್ಕ ಖರ್ಚುವೆಚ್ಚಗಳ ಬಗ್ಗೆ ಆಡಿಟ್‌ನ್ನು ಇಲ್ಲಿಯವರೆಗೂ ಮಾಡಿಲ್ಲ. ನನ್ನ ಕಡೆ ಈ ಖಾತೆ ಬಂದ ಸಮಯದಲ್ಲಿ ಆಡಿಟ್ ಮಾಡತಕ್ಕಂಥ ಒಂದು ಕಾರ್ಯಕ್ರಮವನ್ನು ಜಾರಿಗೆ ತಂದಿದ್ದೇನೆ. ಮೂರುವರ್ಷದಿಂದ ಆಡಿಟ್ ಮಾಡಿದ್ದಾಗಿದೆ. ಆಡಿಟ್ ರಿಪೋರ್ಟ್‌ನಲ್ಲಿ ನ್ಯೂನತೆಗಳನ್ನು ತೋರಿಸಿದ್ದಾರೆ. ಹಣ ಖರ್ಚಾಗಿದೆ, ಚೆಕ್ ಇಲ್ಲ, ಬಿಲ್ಲುಗಳು ಇಲ್ಲ. ಇಂತಹವುಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇದಕ್ಕೆ ಅಲ್ಲಿರತಕ್ಕಂಥ ಚೀಫ್ ಆಫೀಸರ್ ಅಥವಾ ಮುನಿಸಿಪಾಲಿಟಿ ಕಮಿಷನರ್ ಅವರು ಜವಾಬ್ದಾರರೇ ಎಂಬುದನ್ನು ನೋಡಬೇಕು. ನೇರವಾಗಿ ಯಾರಮೇಲೆ ಈ ಜವಾಬ್ದಾರಿ ಇದೆ ಎನ್ನುವುದನ್ನು ಲೆಕ್ಕಪತ್ರ ನೋಡಿ ಇವರ ಪಾಯಿಂಟೆಡ್ ಆಗಿ ಆಪಾದನೆ ಹೊರಿಸುವುದಕ್ಕೆ ಅಫಿಷಿಯಲ್ ಕಮಿಟಿ ಮಾಡಿದ್ದೇವೆ. ಈ ಕಮಿಟಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಅನ್ವಯವಾಗುತ್ತದೆ. ಈ ಕತೆ ಹೇಳುತ್ತಾ ಹೋದರೆ, ಇದರಲ್ಲಿ ಸಮುದ್ರವನ್ನೇ ನುಂಗುವಂಥ ತಿಮಿಂಗಿಲಗಳು ಇವೆ. ಅವುಗಳನ್ನು ಹತೋಟಿಗೆ ತಂದನಂತರ ಏನು ಮಾಡಬೇಕೆಂದು ಯೋಚನೆ ಮಾಡುತ್ತೇವೆ. This is a basic approch. Slip shod.....ಆಗಿ ಮಾಡುವುದಕ್ಕಾಗುವುದಿಲ್ಲ. ಇಲ್ಲೊಂದು ಕಡೆ ಅಲ್ಲೊಂದು ಕಡೆ ಗಧಾಪ್ರಹಾರ ಮಾಡುವುದರಿಂದ ಏನೂ ಸ್ಥಿಮಿತಕ್ಕೆ ಬರುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ತಿಮಿಂಗಿಲಗಳನ್ನು ನಾಶ ಮಾಡುತ್ತೀರೋ ಅಥವಾ ಸಾಕುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಏನು ಮಾಡಿದ್ದೀರಿ, ಅದನ್ನೇ ನಾವು ಮಾಡುತ್ತೇವೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರಚಿಸುವ ಚಂದ್ರಾ ಬಡಾವಣೆಗೆ ಕುಡಿಯುವ ನೀರಿನ ಸರಬರಾಜು ಮಾಡುವ ಬಗ್ಗೆ

ಳಳ್ಳಿ(ಖಿಓ) ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಸಂಸದೀಯ ವ್ಯವಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರಚಿಸುವ ಚಂದ್ರಾ ಬಡಾವಣೆಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಬಡಾವಾಣೆಗೆ ಯಾವಾಗ ಕುಡಿಯುವ ನೀರಿನ ಸೌಲಭ್ಯ ಒದಗಿಸ ಲಾಗುವುದು ?

ಇ) ಈ ಬಡಾವಣೆಗೆ ಈ ತಕ್ಷಣ ೭–೮ ಕೊಳವೆ ಬಾವಿಯನ್ನು ಒದಗಿಸಲು ಸರ್ಕಾರದವರು ಏಕೆ ಕ್ರಮ ತೆಗದುಕೊಳ್ಳ ಬಾರದು ?

ಪ್ರೊ ಎ. ಲಕ್ಷ್ಮೀಸಾಗರ್ (ಸಂಸದೀಯ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸುಮಾರು ೨ ವರ್ಷಗಳಲ್ಲಿ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲಾಗುವುದು.

ಇ) ಈ ಬಡಾವಣೆಯಲ್ಲಿ ಕೆಲವು ಮನೆಗಳಾಗಿದ್ದು ಕೊಳವೆ ಬಾವಿಗಳನ್ನು ಹಾಕುವುದರ ಬಗ್ಗೆ ಸರ್ಕಾರದ ಗಮನದಲ್ಲಿದೆ.

ರಾಜ್ಯದಲ್ಲಿ ಜೀತವಿಮುಕ್ತರಿಗೆ ಪುನರ್ ವಸತಿ ಕಲ್ಪಿಸುವುದು

೪೫(೨೫೩) ಶ್ರೀ ಪಿ. ಸಿ. ಮಂಜಿನಿಸ್ವಾಮಯ್ಯ (ದೇವನಹಳ್ಳಿ).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ರಾಜ್ಯದಲ್ಲಿ ಜೀತ ವಿಮುಕ್ತರ ಪುನರ್ ವಸತಿ ಅನುಷ್ಠಾನ ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ನೀಡಿರುವ ಆರ್ಥಿಕ ಸಹಾಯವೆಷ್ಟು ಮತ್ತು ಇದನ್ನು ಜಾರಿ ಮಾಡುವ ಅಧಿಕಾರಿಗಳು ಯಾರು ?

ಆ) ಈಗ ಪುನರ್‌ವಸತಿ ಯೋಜನೆಯಲ್ಲಿ ನೇರವು ಪಡೆದಿರತಕ್ಕಂಥ ಫಲಾನುಭವಿಗಳ ಸ್ಥಿತಿಯು ಉತ್ತಮಗೊಂಡಿದೆಯೇ ? (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು)

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ಪಕ್ಷ ಮಂತ್ರಿಗಳು).

ಅ) ರಾಜ್ಯದಲ್ಲಿ ಜೀತ ವಿಮುಕ್ತರ ಪುನರ್ ವಸತಿ ಅನುಷ್ಠಾನ ಯೋಜನೆಯಲ್ಲಿ ಇಲ್ಲಿಯವರೆಗೆ ೧೨೭೨-೧೯ ಲಕ್ಷ ರೂಪಾಯಿ ಖರ್ಚು ಮಾಡಲಾಗಿದೆ. ಈ ಹಣದಲ್ಲಿ ೫೦:೫೦ ರಂತೆ ಕೇಂದ್ರ. ರಾಜ್ಯ ಸರಕಾರಗಳು ಭರಿಸುತ್ತದೆ. ಇದನ್ನು ಜಾರಿ ಮಾಡುವ ಅಧಿಕಾರಿಗಳು ಜಿಲ್ಲಾ ಮಟ್ಟದಲ್ಲಿ ವಿಶೇಷಜಿಲ್ಲಾಧಿಕಾರಿಗಳು (ಅಭಿವೃದ್ಧಿ) ತಾಲ್ಲೂಕು ಮಟ್ಟದಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು.

ಆ) ಇದುವರೆಗೆ ೩೦,೦೨೯ ಸಂಖ್ಯೆ ಫಲಾನುಭವಿಗಳಿಗೆ ಸಹಾಯ ಧನ ಒದಗಿಸುತ್ತದೆ.

ಇವರ ಆರ್ಥಿಕ ಮಟ್ಟ ಉತ್ತಮವಾಗಿ ಇದೆಯಾ ಎಂದು ಜಿಲ್ಲೆಗಳಿಂದ ಮೌಲ್ಯಮಾಪನ ಕೇಳಿರುತ್ತದೆ. ಈ ಸಹಾಯಧನ ಮಾಕ್ರ ಆಲ್ಲದೇ ಫಲಾನುಭವಿಗಳ ಆರ್ಥಿಕ ಸ್ಥಿತಿ ಉತ್ತಮವಾಗುವವರೆಗೂ ಅವರಿಗೆ ಬೇರೆ ಬೇರೆ ಕಾರ್ಯಕ್ರಮದಡಿ ಪ್ರಯೋಜನ ಕೊಡಬೇಕು, ಬ್ಯಾಂಕುಗಳಿಂದಲೂ ಸಾಲ ಸೌಲಭ್ಯ ಕಲ್ಪಿಸಿ ಕೊಡಬೇಕೆಂದು ಈಗಾಗಲೇ ವಿಶೇಷ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದೇವೆ.

ಪ್ರಾರಂಭದಿಂದ ಇಲ್ಲಿಯವರೆಗೆ ಪುನರ್‌ವಸತಿ ಯೋಜನೆಯಲ್ಲಿ ನೆರವು ಪಡೆದಿರತಕ ಫಲಾನು ಭವಿಗಳ ಜಿಲ್ಲಾವಾರು ಅಂಕಿ ಅಂಶಗಳುಹೀಗಿವೆ.

೧)	ಬೆಂಗಳೂರು ಜಿಲ್ಲೆ	—೩೮೯೯
೨)	ಬೆಳಗಾಂ	— ೧೦
೩)	ಬಳ್ಳಾರಿ	— ೫೭೫
೪)	ಬೀದರ್	— ೧೦
೫)	ಬಿಜಾಪುರ	— ೨೦೨
೬)	ಚಿಕ್ಕಮಗಳೂರು	—೨೩೦೮
೭)	ಚಿತ್ರದುರ್ಗ	— ೯೭೨
೮)	ದಕ್ಷಿಣಕನ್ನಡ	— ೨೬೪
೯)	ಗುಲ್ಬರ್ಗ	— ೪೭
೧೦)	ಹಾಸನ	—೩೦೧೨